ಸಹಾಯಕ್ಕೆ ಧಾವಿಸಿ ಬಂದಿತು. ಇಬ್ಬರನ್ನೂ ಮರದಿಂದ ಕೆಳಗಿಳಿಸಿ ಅವರು ಬಂದ ತೆಪ್ಪದಲ್ಲಿ ಕುಳ್ಳಿರಿಸಿ ರಸ್ತೆಗೆ ಒಯ್ಯಲು ಯತ್ನಿಸಿದಾಗ ಕಾಯ ಒಪ್ಪಲಿಲ್ಲ.

'ನಮ್ಮ ಮನೆಯವರೆಲ್ಲಾ ಅಲ್ಲಿ ನದಿ ಹತ್ರ ಇದ್ದಾರೆ.. ಅವ್ರನ್ನು ಕಾಪಾಡಬೇಕು.. ಅಲ್ಲಿಗೇ ಹೋಗೋಣ.. ನಡೀರಿ..' ಎಂದು ವಿನಂತಿಸಿಕೊಂಡ.

"ಹಾಗಾದರೆ ನೀವಿಲ್ಲೇ ಇರಿ.. ಅಲ್ಲಿದ್ದವರನ್ನು ನಾವು ತರುತ್ತೇವೆ.." ಅವರೆಂದರೂ ಕಾಯ ಒಪ್ಪಲಿಲ್ಲ. "ಅವರೆಲ್ಲಿದ್ದಾರೆಂದು ನಿಮಗೆ ತಿಳಿಯದೇ ಹೋದರೆ..? ನಾನೂ ಬರುತ್ತೇನೆ.." ಎಂದು ಹಠ ಹಿಡಿದ. ಅನ್ಯ ವಿಧಿ ಇಲ್ಲದೇ ಅವನನ್ನು ಮಾತ್ರ ತೆಪ್ಪದಲ್ಲಿ ಕುಳ್ಳಿರಿಸಿ ಕರೆದೊಯ್ದರು. ಹೇಗೋ ಸಂಭಾಳಿಸಿಕೊಂಡು ಏರುತ್ತಿದ್ದ ನೆರೆಯ ನೀರಿನ ಮೇಲೆ ಆ ಸಹಾಯಕರ ತಂಡ ಮಳೆಯನ್ನೂ ಲೆಕ್ಕಿಸದೇ ಕಾರ್ಯತತ್ಪರರಾಗಿದ್ದರು. ಕಾಯ, ಒಮ್ಮೆ ಮನೆಯವರ ಮುಖ ನೋಡಿದರೆ ಸಾಕು ಎನ್ನುವಂತೆ ಉಸಿರು ಬಿಗಿ ಹಿಡಿದು ಕುಳಿತಿದ್ದ. ಇವರಿದ್ದ ನೆಲೆ ತಲುಪುವ ಹೊತ್ತಿಗೆ ಅಲ್ಲಿ ಏನೂ ಉಳಿದಿರಲಿಲ್ಲ.

ಇಷ್ಟು ದಿನ ಪ್ರಶಾಂತವಾಗಿ ಇವರ ಜೀವವಾಹಿನಿಯಾಗಿ ಹರಿಯುತ್ತಿದ್ದ ಕುಮುದಿನಿ, ಈಗ ರೌದ್ರ ರೂಪ ತಾಳಿ ಕಂಟಕಪ್ರಾಯಳಾಗಿದ್ದಳು. ಗೆಜ್ಜೆ ಕಟ್ಟಿ ಇಡೀ ವೇದಿಕೆಯನ್ನು ಆವರಿಸಿ ಹುಚ್ಚೆದ್ದು ಕುಣಿಯುವ ನೃತ್ಯ ಪಟುವಿನಂತೆ ಕುಮುದಿನಿ ಅಜ್ಜರಕಾಡಿನ ಪ್ರತೀ ಇಂಚಿಂಚನ್ನೂ ಆವರಿಸಿ, ಅತ್ತಲಿನ ಕಾಡಿನ ಅಲ್ಪ ಭಾಗವನ್ನೂ ಆಪೋಶನ ಪಡೆದು ಕೊಂಡಿದ್ದಳು.

ಕಾಯ ಮತ್ತು ಇತರ ನಿವಾಸಿಗಳು ವಾಸಿಸುತ್ತಿದ್ದ ಮನೆಗಳು ನೀರಿನ ಹುಚ್ಚು ಆರ್ಭಟಕ್ಕೆ ಧರಾಶಾಯಿಯಾಗಿ, ಯಾವ ಸಾಕ್ಷಿಯೂ ಉಳಿಸದಂತೆ ಆ ನೀರಿನಾಳದಲ್ಲಿ ಕರಗಿ ಹೋಗಿತ್ತು. ಯಾವುದು ನದಿ, ಯಾವುದು ತಾವು ವಾಸವಿದ್ದ ಜಮೀನು ಎಂಬುದೂ ತಿಳಿಯದೇ ಕಾಯನಿಗೆ ಹುಚ್ಚೇ ಹಿಡಿದಂತಾಗಿ, ಅವನು ಮಳೆಯ ಅರ್ಭಟದಲ್ಲೂ, ಹೃದಯ ಬಿರಿದು ಬರುವಂತೆ ಆರ್ತನಾಗಿ ಕೂಗಿ ಕರೆದ, 'ಕಮಲೀ.. ಪಾಂಡೂ..' ಸುತ್ತಲೂ ನೋಡಿದರೂ ಯಾವ ಸಣ್ಣ ಸುಳಿವೂ ಅವರ ಪತ್ತೆ ಹೇಳಲಿಲ್ಲ. ಸುತ್ತಲೂ ನೆರೆ..!

'ಇಲ್ಲೇ ಇದ್ರು.. ನೋಡಿ.. ಈ ಮರದ ಕೆಳಗೆ ಲಿಂಗ ಇಟ್ಟು ಪೂಜೆ ಮಾಡುತ್ತಿದ್ದೆವು.. ಇದೇ ಮರ..' ಎಂದು ತೋರಿಸಿದ. ಮರದ ಕಾಂಡವೂ ಸಂಪೂರ್ಣವಾಗಿ ಜಲಾವೃತವಾಗಿತ್ತು.

'ಇಲ್ಲಿ ಯಾರೂ ಇಲ್ವಲ್ಲಾ.. ಮಾರಾಯ.. ನಿನ್ನ ಜನ ಮಳೆ ಬರುತ್ತಿದ್ದ ಹಾಗೇ ಮೇಲೆ ಬಂದಿರಬೇಕು.. ಬಾ.. ಸೇತುವೆ ಕಡೆಗೆ ಹೋಗೋಣ..' ಎಂದು ತೆಪ್ಪವನ್ನು ಮತ್ತೆ ಸೇತುವೆ ಕಡೆಗೆ ತಿರುಗಿಸಿದರು. ಕಾಯನಿಗೆ ಸಮಾಧಾನವಿರಲಿಲ್ಲ. ಏಕೋ ಮನಸ್ಸು ಏನೇನೋ ಅನಾಹುತವನ್ನು ಕಲ್ಪಿಸಿ ತಲ್ಲಣಿಸುತ್ತಿತ್ತು. ಅವನಿಗೆ ಆ ಜಾಗ ಬಿಟ್ಟು ಹೋಗಲು ಮನಸ್ಸು ಬರಲಿಲ್ಲ.

'ನಾನು ಇಳೀತೀನಿ.. ಅವ್ರು ಇಲ್ಲೇ ಇದ್ದಾರೆ..' ಎಂದಾಗ ರಕ್ಷಣಾ ದಳದವರು ಬಯ್ಯ ತೊಡಗಿದರು.

'ನಿನಗೇನು ಹುಚ್ಚಾ..? ಹೇಳಿದ ಮಾತು ಕೇಳದಿದ್ದರೆ ಎರಡು ಬಿಗೀತೀನಿ.. ಸುಮ್ನೆ ಕೂತ್ಕೋ..' ಎಂದು ಗದರಿದರು. ಕಾಯ ಆಕಾಶಕ್ಕೆ ಆಲಿಸುವಷ್ಟು ಜೋರಾಗಿ ವಿಲಪಿಸಿದ. ಹೋಗುತ್ತಾ ಜಂಪಯ್ಯನಿದ್ದ ಮರದ ಬಳಿ ಒಯ್ದು, ಅವನನ್ನೂ ಕುಳ್ಳಿರಿಸಿ ಸೇತುವೆಯ ತನಕ ಮರಳಿದರು. ಇವರನ್ನು ರಸ್ತೆಯ ಮೇಲೆ ಹತ್ತಿಸಿ ಬದಿಯಲ್ಲಿ ಕುಳ್ಳಿರಿಸಲಾಯಿತು.

ಕಾಯ ಅಲ್ಲೇ ತಲೆಯ ಮೇಲೆ ಕೈ ಹೊತ್ತು ಕುಳಿತ.

'ಏನು ಮಾಡೋದು ಜಂಪಣ್ಣ..? ಹೀಗಾಯಿತಲ್ಲ..?'

'ನಿಮ್ಮದೊಂದೇ ಅಲ್ಲ.. ಇಡೀ ಕಾರಗದ್ದೆ ಸುತ್ತ ಮುತ್ತಲಿನ ಪರಿಸರ ಹಾನಿಗೀಡಾಗಿದೆ.. ವಾಯುಭಾರ ಕುಸಿತವಂತೆ.. ನಾಲ್ಕು ದಿನ ಇದೆಯಂತೆ ಮಳೆ.. ಕೆಲವು ಕಡೆ ಗುಡ್ಡೆಯೇ ಜರಿದು ಬಿದ್ದಿದೆ.. ಕಾರಗದ್ದೆಯ ಆಸುಪಾಸಿನ ಎಸ್ಟೇಟು ಸಂಪೂರ್ಣವಾಗಿ ಹಾನಿಗೀಡಾಗಿದೆ.. ಕಾರಗದ್ದೆಗೂ ಈಗ ಹೋಗೋ ಹಾಗಿಲ್ಲ.. ಏಕೆಂದರೆ ಮೇಲಿನ ಗುಡ್ಡೆ ಜರಿದು ಮಳೆ ಜೊತೆ ಬೆರೆತ ಗುಡ್ಡೆಯ ಮಣ್ಣು ಇಡೀ ಕಾರಗದ್ದೆ ಸುತ್ತ ಹರಿದಿದೆ. ಹಳೇ ಮನಗಳು ಕುಸಿದು ಬಿದ್ದಿವೆ.. ಇಂಥ ಪ್ರಕೃತಿ ವಿಕೋಪ ಹಿಂದೆಂದೂ ನೋಡಿಲ್ಲ..' ಅಲ್ಲಿನ ಹಿರಿಯೊಬ್ಬರು ಸಂತಾಪದಿಂದ ನುಡಿದರು.

ಆ ವ್ಯಕ್ತಿಯ ಪಕ್ಕದಲ್ಲಿ ಅನಾಥಪ್ರಜ್ಞೆಯಿಂದ ನಿಂತಿದ್ದ ವ್ಯಕ್ತಿಯ ಕಡೆಗೆ ಜಂಪಣ್ಣನ ಗಮನ ಹರಿಯಿತು. ಆತ ಬೇರಾರೂ ಅಲ್ಲ.. ಅರವಿಂದ.. ಅಜ್ಜರಕಾಡಿನ ಜಾಗದ ಮಾಲೀಕ.. ತೆರವುಗೊಳಿಸಲು ಧಮಕಿ ಹಾಕಿ ಹೋಗಿದ್ದ ಮಾಲೀಕ.. ಅವನನ್ನು ಕಂಡು ಜಂಪಣ್ಣನಿಗೆ ಅದೇನು ಆಕ್ರೋಶ ಬಂದಿತೋ..!

'ನನ್ನ ಜಾಗ.. ನನ್ನ ಜಾಗ.. ಮಣ್ಣು ಹಾಕ್ತೀನಿ ಅಂದ್ರಲ್ವಾ.. ಹಾಕಿ ಈಗ ಮಣ್ಣು.. ಆದರೆ ನಿಮ್ಮ ಬಾಯಿಗೆ..! ಮನುಷ್ಯತ್ವವೂ ಇಲ್ಲದೇ ವರ್ತಿಸಿದ್ರಲ್ವಾ.. ಈಗ ನಮ್ಮ ಜನ ಎಲ್ಲಿದ್ದಾರೆ ಗೊತ್ತಿಲ್ಲ.. ಅಲ್ಲಿ ಒಂದು ಮನೆಯೂ ಇಲ್ಲದೇ ನೀರು ಪಾಲಾಗಿದೆ..ನಮ್ಮ ಕಣ್ಣೀರು ನಿಮಗೆ ತಾಕದೇ ಇರಲ್ಲ..' ಪಶ್ಚಾತ್ತಾಪಪಟ್ಟು ನುಡಿದ. ಕಾಯ ಅವನೆಡೆಗೆ ತಿರುಗಿಯೂ ನೋಡಲಿಲ್ಲ. ಯಾವ ಸಹಾಯವೂ ಇಲ್ಲದೇ ಕಮಲಿ ಮತ್ತು ಪಾಂಡು ಅಲ್ಲಿಂದ ಹೊರ ಬರುವ ಸಾಧ್ಯತೆ ತೀರಾ ಕಮ್ಮಿ ಎಂದು ಅವನ ಮನಸ್ಸು ಹೇಳುತ್ತಿತ್ತು.

'ನಮಗೆ ಬೆಳಿಗ್ಗೆ ಕಾರಗದ್ದೆಗೆ ಹೋಗಲು ಗಾಡಿ ಸಿಕ್ಕಿತು.. ಆದ್ರೆ ಮಂಜಣ್ಣಾ, ಗೋಪಾಲಣ್ಣಂಗೆ ಸಿಕ್ಕಿತೋ..ಇಲ್ಲವೋ..! ಅವರು ಮಳೆ ನೋಡಿ ವಾಪಸ್ಸು ಹೋದ್ರೋ.. ತಿಳೀಲಿಲ್ಲ.. ಕಮಲಿ ಮತ್ತೆ ಪಾಂಡೂ ಅವ್ರ ಜೊತೆಗೂ ಇರಬಹುದಲ್ವಾ.. ಕಾಯ..?' ಜಂಪಣ್ಣ ನುಡಿದಾಗ ಕಾಯ, 'ಅವರನ್ನು ಎಲ್ಲಿ ಹುಡುಕುವುದು..? ಕಾರಗದ್ದೇಗೂ ಮಣ್ಣಿನ ನೀರು ನುಗ್ಗಿದೆಯಂತೆ..' ಹತಾಶೆಯ ಸ್ವರ ಹೊರಡಿಸಿದ.

'ಹುಡುಕಲೇ ಬೇಕು.. ವಿಧಿ ಇಲ್ಲ.. ಸೇತುವೆ ಮುರಿದ ಕಾರಣ, ಅತ್ತ ಕಡೆ ಹೋಗಲಾಗುವುದಿಲ್ಲ.. ಪರಿಚಿತ ಊರು ಕಾರಗದ್ದೆ ಬಿಟ್ಟರೆ ಬೇರೆ ಕಡೆ ಹೋಗಲು ಸಾಧ್ಯವಿಲ್ಲ..' ಜಂಪಣ್ಣನ ಮಾತು ಸರಿ ಎನಿಸಿತು. ಅಜ್ಜರಕಾಡಿನ ನಿವಾಸಿಗಳ ತಂಡ ಕಾರಗದ್ದೆಯಲ್ಲಿ ಕ್ಷೇಮವಾಗಿ ಸಿಕ್ಕರೆ ಸಾಕು ಎನಿಸಿತು. ಸೇತುವೆಯ ತನಕ ಬಂದು ಅದನ್ನು ದಾಟಲಾರದೇ ಹಿಂತಿರುಗಿ ಹೋಗುತ್ತಿದ್ದ ವಾಹನವನ್ನು ಕಾಡಿ ಬೇಡಿ, ಹತ್ತಿ ಹೇಗೊ ಜಂಪಣ್ಣ ಮತ್ತು ಕಾಯ ಕಾರಗದ್ದೆ ತಲುಪಿದರು. ಕಾರಗದ್ದೆಯ ಪೇಟೆಯೊಳಗೆ ಪ್ರವೇಶಿಸಲು ನಿರ್ಬಂಧ ಹೇರುವಂತೆ ಅಲ್ಲೂ ಠಾಣೆಯ ಬೇಲಿ ಅಡ್ಡ ಹಾಕಲಾಗಿತ್ತು. ಪ್ರಮುಖ ರಸ್ತೆ ಇಡೀ ಕೆಸರುಮಯವಾಗಿತ್ತು. ರಸ್ತೆ ಮಾತ್ರವಲ್ಲದೇ ಮಳೆಯ ನೀರು ರಸ್ತೆಯ ಇಕ್ಕೆಲದಲ್ಲಿದ್ದ ಅಂಗಡಿ ಮುಗ್ಗಟ್ಟುಗಳು, ಮನೆಯೊಳಗೆಲ್ಲಾ ನುಗ್ಗಿ ಕೆಸರಿನ ಗದ್ದೆಯಂತಾಗಿತ್ತು. ಅಷ್ಟೇ ಸಾಲದೇ ಬೆಂಬಿಡದೇ ಕಾಡಿದ ಮಳೆಯ ನೀರು, ಇದ್ದ ರಸ್ತೆಯ ಚರಂಡಿಗಳೆಲ್ಲವೂ ಜರಿದ ಗುಡ್ಡೆಯ ಕೆಸರು ತುಂಬಿದ್ದರಿಂದ, ಮಳೆಯ ನೀರಿನ ಹರಿವಿಗೆ ಜಾಗವಿಲ್ಲದೇ ರಸ್ತೆಯ ಮೇಲೆಯೇ ಹರಿದು ಅವೂ ರಸ್ತೆಯ ಎರಡೂ ಬದಿಯ ಕಟ್ಟಡಗಳಿಗೆ ನುಗ್ಗಿದ್ದರಿಂದ ,ಆ ನೀರನ್ನು ಹೊರ ಚೆಲ್ಲಲೂ ಆಗದೇ ಒಳಗೆ ಹರಿಯ ಬಿಡಲೂ ಆಗದೇ ಅದರಿಂದಾಗುವ ಹಾನಿಯನ್ನು ತಪ್ಪಿಸಲು ಎಲ್ಲಾ ಸಾಮಾನು ಸರಂಜಾಮುಗಳನ್ನ ನೀರಿನ ಮಟ್ಟದಿಂದ ಎತ್ತರದಲ್ಲಿಟ್ಟು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಅಲ್ಲಲ್ಲಿ ದ್ವಿಚಕ್ರ, ಮತ್ತಿತರ ವಾಹನಗಳ ಒಳಗೆ ನೀರು ನುಗ್ಗಿ ಅವೂ ನೀರಿನಲ್ಲಿ ತೇಲುತ್ತಿರುವಂತೆ ಕಾಣುತ್ತಿತ್ತು.

ಇಡೀ ಕಾರಗದ್ದೆ, ಕೆಸರುಗದ್ದೆಯ ಸ್ವರೂಪದಂತೆ ಕಾಣುತಿತ್ತು. ಅಲ್ಲಿನ ಸ್ಥಿತಿ ಕಂಡು ಜಂಪಣ್ಣ ಮತ್ತು ಕಾಯ ಇನ್ನಷ್ಟು ಭೂಮಿಗಿಳಿದು ಹೋಗಿದ್ದರು. ತಮ್ಮ ನಿತ್ಯ ಜೀವನದ ಒಂದು ಭಾಗವೇ ಆಗಿದ್ದ ಅಜ್ಜರಕಾಡು ಮತ್ತು ಕಾರಗದ್ದೆ ಇಂಥ ದಾರುಣ ಸ್ಥಿತಿಗೆ ತಲುಪಿದ್ದು ಕಂಡು ಅವರು ಪೂರ್ತಿಯಾಗಿ ಕುಸಿದು ಹೋದಂತಾಗಿದ್ದರು.

(ಸಶೇಷ)



**ಮಳೆ**

ದಾಹ ಹೆಚ್ಚಿ ಚಡಪಡಿಸಿ
ಪ್ರಕೃತಿಯ ಸುಂದರ ಮೊಗವೊಣಗಿ
ಬಾಡಿ ಕಳೆಗುಂದಿದಾಗ
ಮೋಡದ ಕೊಡೆ ಸರಿಸಿ
ಪನ್ನೀರ ಸುರಿಸಿ ರಮಿಪ ಬಾನು

— ರಮಣಶೆಟ್ಟಿ ರೆಂಜಾಳ್